ಶ್ರೀ ಯು.ಆರ್. ಸಭಾಪತಿ : ನಾನು ಮುಗಿಸಲಿಕ್ಕೆ ಆಗುವುದಿಲ್ಲ. ನನಗೆ ಸಮಯಾವಕಾಶ ಒಂದು ಗಂಟೆ ಕೊಟ್ಟಿದ್ದೀರಿ. ನಾನು ಎರಡು ಮೂರು ಗಂಟೆ ಕೇಳಿದ್ದೇನೆ.

ಉಪಾಧ್ಯಕ್ಷರು : ನಮ್ಮ ಕೊಠಡಿಯೊಳಗೆ ಅಲ್ಲಿ ವಿರೋಧಪಕ್ಷದ ನಾಯಕರು ಇದ್ದಾಗ ನಿಮಗೆ ಒಂದು ಗಂಟೆಗಿಂತ ಹೆಚ್ಚಿಗೆ ಸಮಯ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ರಿಕ್ವೆಸ್ಟ್ ಮಾಡಿಕೊಂಡಿದ್ದಾರೆ. ನಾವು ಇವತ್ತು ಬೆಳಿಗ್ಗೆ 10 ಗಂಟೆಗೆ ಸೇರಿದ್ದೇವೆ. ಊಟ ತಿಂಡಿ ಇಲ್ಲದೆ ಬೆಳಿಗ್ಗೆಯಿಂದ ಕುಳಿತುಕೊಂಡಿದ್ದೇವೆ. ತಾವೇ ಆದೇಶ ಕೊಟ್ಟಿದ್ದೀರಿ 8ಗಂಟೆಯ ತನಕ ಕುಳಿತುಕೊಳ್ಳೋಣವೆಂದು.

ಶ್ರೀ ಪಿ.ಜಿ.ಆರ್.ಸಿಂಧ್ಯ : ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ ಅವತ್ತೇ ಮುಗಿಯಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾಳೆ ಬೆಳಿಗ್ಗೆ 9 ಗಂಟೆಗೆ ಬೇಕಾದರೆ ಬರುತ್ತೇವೆ.

(ಗೊಂದಲ)

ಉಪಾಧ್ಯಕ್ಷರು : ಅವರು ಈಗಾಗಲೇ 45 ನಿಮಿಷ ಮಾತನಾಡಿದ್ದಾರೆ. ಇನ್ನು ಹದಿನೈದು ನಿಮಿಷ ಮಾತನಾಡಿದರೆ ಅವರದ್ದು ಮುಗಿದುಹೋಗುತ್ತದೆ.

ಶ್ರೀ ಯು.ಆರ್. ಸಭಾಪತಿ : ಇಲ್ಲ, ನಾನು ಮಾತನಾಡಿದ್ದು ಮೂವತ್ತು ನಿಮಿಷ. ಮೂವತ್ತು ನಿಮಿಷದಲ್ಲಿ ಹದಿನೈದು ನಿಮಿಷ ಗಲಾಟೆ ಮಾಡಿ ತೆಗೆದುಕೊಂಡರು. ನೀವು ಹೇಳಿದ್ದು ಸರಿಯಿಲ್ಲ, ಉಪಾಧ್ಯಕ್ಷರೇ. ನಾನು ಅದನ್ನು ಒಪ್ಪುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ನಾವೂ ಕೂಡ ಸುಸ್ತಾಗಿದ್ದೇವೆ. ದಯಮಾಡಿ ನಾಳೆ ಎಂಟುಗಂಟೆಗೆ ಬೇಕಾದರೆ ತಾವು ಇಟ್ಟುಕೊಳ್ಳಿ.

ಉಪಾಧ್ಯಕ್ಷರು : ಈಗ ಒಂದು ಪ್ರಕಟಣೆ.

ಪ್ರಕಟಣೆ

ಉಪಾಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ, ದಿನಾಂಕ 26ನೇ ಆಗಸ್ಟ್, 1996ರಂದು ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿತೆಂದು ಈ ಮೂಲಕ ತಿಳಿಸುತ್ತಿದ್ದೇನೆ.

1. ಕರ್ನಾಟಕ ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 1996
2. ಕರ್ನಾಟಕ ಸಿವಿಲ್ ನ್ಯಾಯಾಲಯಗಳ (ತಿದ್ದುಪಡಿ) ವಿಧೇಯಕ, 1996

3. ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಅರ್ಜನೆ ಮತ್ತು ವರ್ಗಾವಣೆ) ವಿಧೇಯಕ, 1996

ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ನಾಳೆ 11 ಗಂಟೆಗೆ ಪುನಃ ಸೇರುವುದು.

(ಸದನವು 8 ಗಂಟೆ 2 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 27ನೇ ಆಗಸ್ಟ್ ಮಾಹೆ 1996ರ ಮಂಗಳವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)